# ಸೈಂಟ್ ಜೋಸೆಫ್ ವಿವಿ ನೂತನ ಬಿ-ಬ್ಲಾಕ್ ಕ್ಯಾಂಪಸ್ ಉದ್ಘಾಟನೆ



ಬೆಂಗಳೂರು, ಸೆ. 5: ನಗರದ ಬನ್ನೇರುಘಟ್ಟ ರಸ್ತೆಯಲ್ಲಿ ಸೈಂಟ್ ಜೋಸೆಫ್ ವಿಶ್ವ ವಿದ್ಯಾನಿಲಯದ ನೂತನ ಬಿ-ಬ್ಲಾಕ್ ಕ್ಯಾಂಪಸ್ ಅನ್ನು ಅರಣ್ಯ ಮತ್ತು ಪರಿಸರ ಸಚಿವ ರಾಮಲಿಂಗಾ ರೆಡ್ಡಿ ಅವರು ಶುಕ್ರವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಮಲಿಂಗಾ ರೆಡ್ಡಿ, ಶಿಕ್ಷಣದಲ್ಲಿ ಶಿಸ್ತು ಮತ್ತು ನೈತಿಕ ಘನತೆಯ ಮಹತ್ವ ಅಗತ್ಯ. ಶೈಕ್ಷಣಿಕ ಜ್ಞಾನದ ಜೊತೆಗೆ ಉತ್ತಮ ನಾಗರಿಕರನ್ನು ರೂಪಿಸುವಲ್ಲಿ ಈ ಮೌಲ್ಯಗಳು ಅತ್ಯಗತ್ಯ ಎಂದರು.

ಈ ವೇಳೆ ಮಾತನಾಡಿದ ಸೈಂಟ್ ಜೋಸೆಫ್ ವಿವಿ ಉಪಕುಲಪತಿ ಡಾ.ವಿಕ್ಟರ್ ಲೋಬೋ ಎಸ್.ಜೆ., ನೂತನ ಕ್ಯಾಂಪಸ್ ಕೇವಲ ಭೌತಿಕ ಮೂಲಸೌಕರ್ಯದ ವಿಸ್ತರಣೆಯಾಗದೆ, ವಿಚಾರಗಳು, ನವೀನತೆ ಮತ್ತು ಸಂಬಂಧಗಳ ಬೆಳವಣಿಗೆಗೆ ವೇದಿಕೆಯಾಗಬೇಕು ಎಂದು ಹೇಳಿದರು.

ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾದೋ ಮಾತನಾಡಿ, ಸೈಂಟ್ ಜೋಸೆಫ್ ವಿಶ್ವ ವಿದ್ಯಾಲಯದ ಸಮಗ್ರ ಹಾಗೂ ಮೌಲ್ಯಾಧಾರಿತ ಶಿಕ್ಷಣದ ಬದ್ಧತೆಯನ್ನು ಹೊಂದಿದೆ. ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುವ ಶಿಕ್ಷಣ ಸಂಸ್ಥೆಯಾಗಿ, ಶಿಕ್ಷಣವನ್ನು ಪಡೆಯಲು ಸಾಧ್ಯವಾಗದವರ ಪರವಾಗಿ ವಿಶ್ವವಿದ್ಯಾನಿಲಯ ನಿಲ್ಲುತ್ತದೆ. ಎಲ್ಲರಿಗೂ ಅವಕಾಶ ಕಲ್ಪಿಸುವ ಬದ್ಧತೆಯನ್ನು ಮುಂದುವರಿಸುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೈಂಟ್ ಜೋಸೆಫ್ ವಿಶ್ವವಿದ್ಯಾನಿಲಯದ ಕುಲಪತಿ ಡಯೋನಿಸಿಯಸ್ ವಾಜ್, ಬಿ-ಬ್ಲಾಕ್ ನಿರ್ದೇಶಕ ಡಾ.ಅಲೈನ್ಸ್ ಪಿಯಸ್ ಫರ್ನಾಂಡಿಸ್, ಡಾ. ಮೆಲ್ವಿನ್ ಪಿಂಟೋ ಮತ್ತಿತರರು ಹಾಜರಿದ್ದರು.